ಅಸಲು ದಾವೆ ಸಂಖ್ಯೆ -161/2018
ಪಿ.ಡಬ್ಲ್ಯೂ - 02
ದಿನಾಂಕಃ 25-10-2025
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ. ಎನ್ ಎಸ್ ಪಿ ವಕೀಲರಿಂದ</u>

ನಿಮ್ಮ ಮುಖ್ಯ ವಿಚಾರಣೆ ಪತ್ರಕ್ಕೆ ಯಾರು ಮಾಹಿತಿ ನೀಡಿದರು ಎಂದರೆ ನಾನೇ ನೀಡಿರುತ್ತೇನೆ. ದಾವಾ ಆಸ್ತಿಯ ನಂಬರ ಹೇಳಲು ಆಗುತ್ತದೆಯಾ ಎಂದರೆ ಪಂಚಾಯತಿ ನಂಬರ 468, ಸರ್ವೆ ನಂ. 87/1 ಇರುತ್ತದೆ. ದಾವಾ ಆಸ್ತಿಯ ಅಳತೆ ಹೇಳಲು ಆಗುತ್ತದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸದರಿ ದಾವಾ ಆಸ್ತಿಯು ಮೂಲತಃ ಯಾರದ್ದು ಎಂದರೆ ಪ್ರತಿವಾದಿಯರದ್ದು ಇರುತ್ತದೆ. ಪ್ರತಿವಾದಿಯರ ದಾವಾ ಆಸ್ತಿಯನ್ನು ಯಾರು ಖರೀದಿ ಹಿಡಿದರು ಎಂದರೆ ವಾದಿಯರು ಜಂಟಿಯಾಗಿ ಖರೀದಿ ಹಿಡಿದಿರುತ್ತಾರೆ. ಖರೀದಿ ಪತ್ರವನ್ನು ಏನಾದರೂ ನೀವು ನೋಡಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಖರೀದಿ ಪತ್ರ ಕೇವಲ ಬಸನಗೌಡ ಸಣ್ಣಮನಿ ರವರ ಹೆಸರಿನಲ್ಲಿ ಮಾತ್ರ ಖರೀದಿ ಆಗಿದೆ ಎಂದರೆ ಹೌದು ಎಂದು ನುಡಿಯುತ್ತಾರೆ. ಆದ ಕಾರಣ ಚನ್ನಬಸನಗೌಡ ಸಣ್ಣಮನಿ ರವರಿಗೆ ಹಕ್ಕು ಇಲ್ಲ ಎಂದರೆ ಹಕ್ಕು ಇದೆ ಎಂದು ನುಡಿಯುತ್ತಾರೆ. ಯಾವ ಆಧಾರದ ಮೇಲೆ 1 ನೇ ವಾದಿಗೆ ಹಕ್ಕು ಇದೆ ಎಂದರೆ 1 ಮತ್ತು 2 ನೇ ವಾದಿಯರು ಅಣ್ಣ ತಮ್ಮಂದಿರು ಆದ ಕಾರಣ ಹಕ್ಕು ಇದೆ ಎಂದು ನುಡಿಯುತ್ತಾರೆ.

ಈ ದಾವೆಯನ್ನು ವಾದಿಯರು ಪ್ರತಿವಾದಿಯರ ವಿರುದ್ಧ ಯಾವ ಕಾರಣಕ್ಕಾಗಿ ಹೂಡಿದ್ದಾರೆ ಎಂದರೆ ಒತ್ತುವರಿ ಮಾಡಿದ್ದಾರೆ ಎಂದು ದಾವೆ ಮಾಡಿದ್ದಾರೆ. ಯಾರು ಒತ್ತುವರಿ ಮಾಡಿದ್ದಾರೆ ಎಂದರೆ ಯಾರು ಒತ್ತುವರಿ ಮಾಡಿರುವುದಿಲ್ಲ. ದಾವೆಯನ್ನು ಯಾವ ಕಾರಣಕ್ಕಾಗಿ ಹೂಡಿದ್ದಾರೆ ಎಂದರೆ ಮುಂದೆ ಯಾವುದೇ ಜಗಳ ಆಗಬಾರದು ಎಂದು ದಾವೆ ಮಾಡಿದ್ದಾರೆ. ದಾವಾ ಆಸ್ತಿಯ ಚಕ್ಕಬಂದಿ ಹೇಳಲು ಆಗುತ್ತದೆಯಾಎಂದರೆ ಪೂರ್ವಕ್ಕೆಃ ಷಣ್ಮುಖಗೌಡ ಪಾಟೀಲ ರವರ ಆಸ್ತಿ, ಪಶ್ಚಿಮಕ್ಕೆ ಸರ್ಕಾರಿ ರಸ್ತೆ, ಉತ್ತರಕ್ಕೆ ಸುರೇಶ ಶಂಭಣ್ಣ ರವರ ಆಸ್ತಿ, ದಕ್ಷಿಣಕ್ಕೆ ಪ್ರತಿವಾದಿಯ ಆಸ್ತಿ ಇದೆ.

ಸುರೇಶ ಶಂಭಣ್ಣ ನಿಮಗೆ ಏನಾಗಬೇಕು ಎಂದರೆ ಖಾಸ ತಮ್ಮ ಆಗಬೇಕು. ನಿಮ್ಮ ತಮ್ಮ ಸುರೇಶ ಶಂಭಣ್ಣ ರವರು ಸಹ 1996 ರಲ್ಲಿ ತಮ್ಮ ಆಸ್ತಿಯನ್ನು ಪ್ರತಿವಾದಿಯರಿಂದ ಖರೀದಿಸಿದ್ದಾರೆ ಎಂದರೆ ಸರಿ. ಎಷ್ಟು ಗುಂಟೆ ಖರೀದಿ ಹಿಡಿದಿದ್ದಾರೆ ಎಂದರೆ 5 ಗುಂಟೆ. 2 ನೇ

ವಾದಿ ಎಷ್ಟು ಗುಂಟೆ ಖರೀದಿ ಹಿಡಿದಿದ್ದಾರೆ ಎಂದರೆ 5 ಗುಂಟೆ. ಖರೀದಿ ಕೊಡುವಾಗ ಪ್ರತಿವಾದಿಯರು ಅಳತೆ ಮಾಡಿ, ಹದ್ದಬಸ್ತ ಮಾಡಿ ಖರೀದಿ ನೀಡಿರುತ್ತಾರೆ ಎಂದರೆ ಸರಿ.

ದಾವಾ ಆಸ್ತಿಯ ದಕ್ಷಿಣಕ್ಕೆ ಪ್ರತಿವಾದಿಯರ 11 ಗುಂಟೆ 14 ಆಣೆ ಆಸ್ತಿ ಇದೆ ಎಂದರೆ ಸರಿ. ಸದರಿ ಆಸ್ತಿಯಲ್ಲಿ ಪ್ರತಿವಾದಿಯರಿಗೆ ಈವತ್ತಿನವರೆಗೂ ಕಬ್ಜಾದಲ್ಲಿ ಇದ್ದಾರೆ ಎಂದರೆ ಸರಿ. ನಿಮ್ಮ ಮುಖ್ಯ ವಿಚಾರಣೆ ಪತ್ರದಲ್ಲಿ ಪ್ಯಾರಾ 5 ರಲ್ಲಿ ಹೇಳಿರುವಂತೆ ನೀವೆನಾದರೂ ಹೇಳಿ ಬರೆಸಿದ್ದೀರಾ ಎಂದರೆ ನಾನೇ ಹೇಳಿ ಬರೆಸಿರುತ್ತೇನೆ. ದಾವಾ ಆಸ್ತಿಯಲ್ಲಿ ವಾದಿಯರು ಕಟ್ಟಿಸಿದ ಮನೆಯ ಉದ್ದ ಮತ್ತು ಅಗಲವನ್ನು ಅಳತೆ ಮಾಡಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಪಶ್ಚಿಮ ದಿಕ್ಕಿಗೆ 4-5 ಪೂಟ ಜಾಗ ಬಿಟ್ಟಿದ್ದಾರೆ ಎಂದು ಬರೆಸಿದ್ದು ಅದನ್ನು ಏನದರೂ ಅಳತೆ ಮಾಡಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಪೂರ್ವ ದಿಕ್ಕಿಗೆ ಹಿತ್ತಲು ಜಾಗ ಬಿಟ್ಟಿದ್ದಾರೆ ಎಂದು ಹೇಳಿದ್ದು ಅದರ ಅಳತೆ ಎಷ್ಟು ಎಂದರೆ ಅಂದಾಜು ಪೂರ್ವ ಪಶ್ಚಿಮ 60 ಪೂಟ ಇದೆ. ನಿವೇನಾದರೂ ಅಳತೆ ಮಾಡಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಉತ್ತರ ದಿಕ್ಕಿಗೆ 2 ಪೂಟ ಮತ್ತು ದಕ್ಷಿಣ ದಿಕ್ಕಿಗೆ 12 ಪೂಟ ಬಿಟ್ಟಿದ್ದಾರೆ ಎಂದು ಬರೆಸಿದ್ದು ಅದನ್ನು ಏನಾದರೂ ಅಳತೆ ಮಾಡಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಹಾಗಾದರೆ ನೀವು ಅಳತೆ ಮಾಡದೆ ಇದ್ದರು ಯಾವ ಆಧಾರದ ಮೇಲೆ ನೀವು ಈ ಅಳತೆಗಳನ್ನು ಬರೆಸಿದ್ದೀರಿ ಎಂದರೆ ಅಂದಾಜಿನ ಮೇಲೆ ಬರೆಸಿರುತ್ತೇನೆ.

1 ನೇ ವಾದಿ ಏನು ಕೆಲಸ ಮಾಡುತ್ತಾರೆ ಎಂದರೆ ನೌಕರಿ ಮಾಡುತ್ತಾರೆ. ಅವರ ಬಳಿ ಕೃಷಿ ಕೆಲಸಕ್ಕೆ ಟ್ರಾಕ್ಟರ ಇದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನೀವು ಮೇಲೆ ಹೇಳಿದ ಅಳತೆ ಹಾಗೆ ಜಾಗ ಬಿಟ್ಟಿದ್ದಾರೆ ಎಂದು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಮನೆಯಲ್ಲಿ ನೀವು ಮತ್ತು ನಿಮ್ಮ ಸಹೋದರಿ ಕೂಡಿ ಇದ್ದೀರಾ ಎಂದರೆ ಕೂಡೇ ಇರುತ್ತೇವೆ. ನಿಮ್ಮ ಮನೆಯ ಅಳತೆ ಎಷ್ಟು ಎಂದರೆ ಗೊತ್ತಿಲ್ಲ. ಆಜಾಬಾಜು ಎಷ್ಟು ಎಷ್ಟು ಜಾಗ ಬಿಟ್ಟಿದ್ದೀರಿ ಎಂದರೆ ನನಗೆ ಗೊತ್ತಿಲ್ಲ.

ನೀವು ಮತ್ತು 2 ನೇ ವಾದಿ ಖರೀದಿ ಹಿಡಿದ ನಂತರ ಎಷ್ಟು ವರ್ಷಕೆ ಮನೆ ಕಟ್ಟಿರುತ್ತೀರಿ ಎಂದರೆ ನಾವು 1 ರಿಂದ 2 ವರ್ಷದಲ್ಲಿ ಮನೆ ಕಟ್ಟಿರುತ್ತೇವೆ. 2 ನೇ ವಾದಿಯು ಸುಮಾರು 5-6 ವರ್ಷದ ನಂತರ ಮನೆ ಕಟ್ಟಿರುತ್ತಾರೆ. ನೀವು 2 ನೇ ವಾದಿಯ ಜಾಗವನ್ನು ಅತೀಕ್ರಮಣ ಮಾಡಿ ಮನೆಯನ್ನು ಕಟ್ಟಿದ್ದು ಸದರಿ 2 ನೇ ವಾದಿಯು ಪ್ರತಿವಾದಿಯರ ಆಸ್ತಿಯನ್ನು ಅತೀ ಕ್ರಮಣ

ಮಾಡಿ ಮನೆ ಕಟ್ಟಿದ್ದಾರೆ ಎಂದರೆ ಸರಿಯಲ್ಲ. ನೀವು ಮತ್ತು ವಾದಿಯರು ಪ್ರತಿವಾದಿಯ ಆಸ್ತಿಯನ್ನು ಎತ್ತಿ ಹಾಕುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ದಾವಾ ಆಸ್ತಿ ಅಳತೆ ಮಾಡುವಾಗ ಸರ್ವೆ ಅಧಿಕಾರಿಗಳು ಬಂದಿದ್ದರು ಆಗ ನೀವು ಇದ್ದರಾ ಎಂದರೆ ಇದ್ದೇನು ಎಂದು ನುಡಿಯುತ್ತಾರೆ. ಮುಂದುವರೆದು ನನಗೆ ನೋಟಿಸ ನೀಡಿಲ್ಲ. ಸರ್ವೆ ಅಧಿಕಾರಿಗಳು ತಾವು ಸಲ್ಲಿಸಿದ ವರದಿಯಲ್ಲಿ ವಾದಿಯರು ಪ್ರತಿವಾದಿಯರ ಆಸ್ತಿಯನ್ನು ಅತಿಕ್ರಮಣ ಮಾಡಿದ್ದಾರೆ ಎಂದು ತಿಳಿಸಿರುವ ವಿಷಯ ನಿಮಗೆ ಗೊತ್ತು ಎಂದರೆ ನನಗೆ ಗೊತ್ತು ಎಂದು ನುಡಿಯುತ್ತಾರೆ.

ಇಂದು 1 ನೇ ವಾದಿಯು ನಿಮ್ಮನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿದ್ದಾರೆ ಎಂದರೆ ಸರಿಯಲ್ಲ. ವಕೀಲರು ಕರೆ ಮಾಡಿದ್ದರು ಆದ ಕಾರಣ ಬಂದಿದ್ದೇನೆ. 1 ನೇ ವಾದಿಯು ನಿಮಗೆ ಎಂದಿಗೂ ಸಾಕ್ಷಿ ಹೇಳಿ ಎಂದು ಕರೆದಿಲ್ಲ ಎಂದರೆ ಸರಿ. ವಕೀಲರು ಹೇಳಿದಕ್ಕೆ ಬಂದಿದ್ದೀರಿ ಎಂದರೆ ಸರಿ. ವಾದಿಯರು ದಾವೆ ಹೂಡಿದ ಬಗ್ಗೆ ಪ್ರತಿವಾದಿಯರು ಸಲ್ಲಿಸಿದ ತಕರಾರಿನ ಬಗ್ಗೆ ನಿಮಗೇನಾದರೂ ಸ್ವಂತಕ್ಕೆ ಮಾಹಿತಿ ಇದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಯರು ವಾದಿಯ ಆಸ್ತಿಗೆ ಹರಕತ್ತು ಮಾಡಿಲ್ಲ ಎಂದರೆ ಸರಿ. ಪ್ರತಿವಾದಿಯರು ಆಸ್ತಿಯನ್ನು ಎತ್ತಿ ಹಾಕುವ ಉದ್ದೇಶದಿಂದ ನೀವು ಮತ್ತು 1 ನೇ ವಾದಿ ಮಿಲಾಪೆಯಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. 1 ನೇ ವಾದಿ ಏನು ಹೇಳಿದ್ದಾನೋ ಅದನ್ನು ಹೇಳಲು ನೀವು ಬಂದಿದ್ದೀರಿ ಎಂದರೆ ಸರಿಯಲ್ಲ.

ನಿಮ್ಮ ಪ್ರಮಾಣ ಪತ್ರದಲ್ಲಿ ಸರ್ವೆಯರ ರವರು ದಿಃ 21-05-2018 ರಂದು ಕಲ್ಲನ್ನು ನಿಲ್ಲಿಸಿದ್ದಾರೆ ಎಂದು ಬರೆಸಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಯರು ತಂತಿ ಬೇಲಿ ಹಾಕಿದ್ದಾರೆ ಎಂದು ಬರೆಸಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಯರು ಆಸ್ತಿಯನ್ನು ಎತ್ತಿ ಹಾಕುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಪ್ರತಿವಾದಿಯರು ಅವರ ಆಸ್ತಿಯ ಸುತ್ತಲೂ ತಂತಿ ಬೇಲಿ ಹಾಕಿಸಿದ್ದಾರಾ ಎಂದರೆ ಅವರ ಆಸ್ತಿಯ ದಕ್ಷಿಣಕ್ಕೆ ಮತ್ತು ಪಶ್ಚಿಮಕ್ಕೆ ಹಾಕಿಸಿದ್ದಾರೆ. ಪ್ರತಿವಾದಿಯರು ತಮ್ಮ ಆಸ್ತಿಯಲ್ಲಿ ಯಾವಾಗ ಮನೆ ಮನೆ ಕಟ್ಟಿಸಿರುತ್ತಾರೆ ಎಂದರೆ ಈಗಿಂದ 5-6 ವರ್ಷದ ಹಿಂದೆ ಕಟ್ಟಿಸಿರುತ್ತಾರೆ. ಅವರ ಆಸ್ತಿಯ ದಕ್ಷಿಣಕ್ಕೆ ಮನೆಯನ್ನು ಕಟ್ಟಿಸಿರುತ್ತಾರೆ ಎಂದರೆ ಸರಿ. ಉತ್ತರಕ್ಕೆಃ ಖಾಲಿ ಜಾಗ ಇದೆ ಎಂದರೆ ಸರಿ. ಪ್ರತಿವಾದಿಯರು ಮನೆಯನ್ನು

ಕಟ್ಟುವ ಮೊದಲು ಊರಿನಲ್ಲಿ ಹಳೆಯ ಮನೆಯಲ್ಲಿ ಇದ್ದರು ಎಂದರೆ ಸರಿ. ಆಗ ಪ್ರತಿವಾದಿಯರ ಆಸ್ತಿ ಬೈಲು ಜಾಗ ಇತ್ತು ಎಂದರೆ ಸರಿ. ಬೈಲು ಜಾಗ ಇರುವುದನ್ನು ನೋಡಿಕೊಂಡು ನೀವು ಮತ್ತು ವಾದಿಯರು ಪ್ರತಿವಾದಿಯರ ಆಸ್ತಿಯನ್ನು ಅತೀಕ್ರಮಣ ಮಾಡಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸವಣೂರು.